**ಓ.ಎಸ್. ನಂ. 90/2023** **ಪಿ.ಡಬ್ಲ್ಯೂ- 1**

**ಸಾಕ್ಷಿಯನ್ನು ದಿನಾಂಕ 24.1.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 1, 3 ಮತ್ತು 4 ನೇ ಪ್ರತಿವಾದಿ ಪರ ಶ್ರೀ ಎಂ.ಎನ್.ಆರ್ ವಕೀಲರಿಂದಃ**

ಸಿದ್ದೇಗೌಡರು ತೀರಿಕೊಂಡಾಗ ಬೊಪ್ಪನಹಳ್ಳಿಯ ನನ್ನ ಮನೆಯಲ್ಲಿದ್ದರು. ಆ ಬಗ್ಗೆ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ. ದಾವಆಸ್ತಿಯು ಖಾತೆಯು ಸಿದ್ದೇಗೌಡರ ಹೆಸರಿಗೆ ಆಗಿರುವುದನ್ನು ನಾನು ಪ್ರಶ್ನಿಸಿರುವುದಿಲ್ಲ. ಸಾಕ್ಷಿದಾರರು ಮುಂದುವರಿದು ಖಾತೆಯಾಗಿರುವುದು ಗೊತ್ತಿರಲಿಲ್ಲ ಎನ್ನುವರು. ಓ.ಎಸ್ 33/2010 ರಂತೆ ದಾಖಲಿಸಿರುವ ದಾವೆಯಲ್ಲಿ ಈ ದಾವೆಯ 3 ಮತ್ತು 4 ನೇ ಪ್ರತಿವಾದಿಯರಿಗೆ ವಿಲ್ ಮಾಡಿಕೊಟ್ಟಿರುತ್ತಾರೆ ಎಂದು ತಕರಾರು ಸಲ್ಲಿಸಿರುವ ವಿಚಾರ ನನಗೆ ಸದರಿ ದಾವೆಯಲ್ಲೆ ಗೊತ್ತಿತ್ತು. ಸದರಿ ವಿಲ್‌ನ್ನು ಪ್ರಶ್ನೆ ಮಾಡಲು ತೊಂದರೆ ಇತ್ತಾ ಎಂದರೆ ಸಾಕ್ಷಿದಾರರು ವಿಲ್ ಪ್ರಶ್ನೆ ಮಾಡಿ ಓ.ಎಸ್ 33/2010 ನ್ನು ದಾಖಲಿಸಿರುತ್ತೇನೆ ಎನ್ನುವರು. ದಾವಆಸ್ತಿಯು ಸಿದ್ದೇಗೌಡರಿಗೆ ಸೇರಿದ್ದು ಅವರು ತಮ್ಮ ಇಚ್ಛಾನುಸಾರ ದಾವಆಸ್ತಿಯನ್ನು 3 ಮತ್ತು 4 ನೇ ಪ್ರತಿವಾದಿಯರಿಗೆ ವಿಲ್ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರಿದು ಪಿತ್ರಾರ್ಜಿತ ಆಸ್ತಿ ಎನ್ನುವರು. ಓ.ಎಸ್ 33/2010 ವಜಾ ಆದ ನಂತರ ಅದನ್ನು ಪುನರ್ ಸ್ಥಾಪನೆ ಮಾಡಲು ಪ್ರಯತ್ನಿಸಿರುತ್ತೀರಾ ಎಂದರೆ ಸಾಕ್ಷಿದಾರರು ಪ್ರಯತ್ನಿಸಿರುತ್ತೇನೆ ಎನ್ನುವರು. ದಾವಆಸ್ತಿಗೂ ವಾದಿಯರಿಗೂ ಯಾವುದೇ ಸಂಬಂಧ ಇರುವುದಿಲ್ಲ, ದಾವಆಸ್ತಿಯಿಂದ ಪ್ರತಿವಾದಿಯರನ್ನು ಹೊರ ಹಾಕಲು ಸುಳ್ಳು ದಾವೆಯನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ದಾವಆಸ್ತಿಯು ಸಿದ್ದೇಗೌಡರ ಸ್ವಯಾರ್ಜಿತ ಆಸ್ತಿಯಾಗಿದ್ದು ಅವರು 3 ಮತ್ತು 4 ನೇ ಪ್ರತಿವಾದಿಯರಿಗೆ ವಿಲ್ ಮಾಡಿಕೊಟ್ಟಿದ್ದರೂ 3 ಮತ್ತು 4 ನೇ ಪ್ರತಿವಾದಿಯರ ಸ್ವಾಧೀನಕ್ಕೆ ತೊಂದರೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರಿದು ಅದು ಪಿತ್ರಾರ್ಜಿತ ಆಸ್ತಿ ಎನ್ನುವರು. ದಾವಆಸ್ತಿಯಲ್ಲಿ ಸ್ವಾಧೀನದಲ್ಲಿರುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ ಎಂದರೆ ಸಾಕ್ಷಿದಾರರು ಹಾಜರುಪಡಿಸಿರಬಹುದು ಎಂದು ನುಡಿದು ನಂತರ ಹಾಜರುಪಡಿಸಿರುತ್ತೇನೆ ಎನ್ನುವರು.

ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ವಕೀಲರು ಸಮಯ ಕೋರಿದ್ದು ಸಮಯ ನೀಡಲಾಯಿತು.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.